# ಪ್ರಬಂಧ ರಚನೆ

**ಪ್ರಬಂಧ ಎಂದರೇನು?**

ಪ್ರಬಂಧ ಎನ್ನುವುದು ಗದ್ಯ ಸಾಹಿತ್ಯದ ವಿಶಿಷ್ಟ ರೂಪ. ಪ್ರಬಂಧವು ಲೇಖಕನ ವೈಯಕ್ತಿಕ ಭಾವನೆಗಳನ್ನು ಅಭಿವ್ಯಕ್ತಿ ಪಡಿಸುವ ಸಾಧನವಾಗಿದೆ. ಪ್ರಬಂಧವು ಲೇಖಕನು ನೀಡಿದ ವಿಷಯದ ಕುರಿತು ಸರಿಯಾಗಿ ಆಲೋಚಿಸಿ ಕ್ರಮಬದ್ಧವಾಗಿ ಬರೆಯುವ ಸಾಹಿತ್ಯದ ಒಂದು ರೂಪವಾಗಿದೆ. ಪ್ರಬಂಧ ಎಂದರೆ ಪ್ರಯತ್ನಿಸು ಮತ್ತು ಪ್ರಯತ್ನಪಡು ಎಂಬ ಅರ್ಥಗಳಿವೆ. ಇಲ್ಲಿ ನಾವು ಲೇಖಕನ ಭಾವನೆಗಳನ್ನು ಕ್ರಮಬದ್ಧವಾಗಿ ಬರೆಯಲು ಪ್ರಯತ್ನಿಸುವುದು ಎಂದು ತಿಳಿಯಬಹುದಾಗಿದೆ.

ಪ್ರಬಂಧ ಎಂದರೆ ಕ್ರಮಾನುಸಾರ, ವ್ಯವಸ್ಥಿತ ರೀತಿಯಲ್ಲಿ ಕಟ್ಟುವುದು ಎಂದರ್ಥ. ಇಲ್ಲಿ 'ಪ್ರ' ಎಂದರೆ ಕ್ರಮಾನುಗತವಾಗಿ, 'ಬಂಧ' ಎಂದರೆ ಕಟ್ಟುವುದಾಗಿದೆ. ಇಲ್ಲಿ ಕಟ್ಟುವುದು ಎಂದರೆ ಪದಗಳನ್ನು, ವಾಕ್ಯಗಳನ್ನು ಕಟ್ಟುವುದಾಗಿದೆ. ಹೇಗೆ ಹೂವಾಡಗಿತ್ತಿ ಹೂಗಳನ್ನು ವ್ಯವಸ್ಥಿತವಾಗಿ ದಾರದಲ್ಲಿ ಪೋಣಿಸುವಳೋ ಹಾಗೆಯೇ ಇಲ್ಲಿ ವಿದ್ಯಾರ್ಥಿ, ಸ್ಪರ್ಧಾರ್ಥಿ ಒಂದು ವಿಷಯದ ಕುರಿತು ಪದಗಳನ್ನು ಕಟ್ಟುವುದಾಗಿದೆ.

**<u>ಪ್ರಬಂಧದ ವಿಧಗಳು</u> :**

1)ಶಿಕ್ಷಣ ಚಿಂತನಾ ಪ್ರಬಂಧಗಳು
2)ವರ್ಣನೆ ಮಾಡುವ ಪ್ರಬಂಧಗಳು
3)ಲಲಿತ ಪ್ರಬಂಧಗಳು
4)ವಿವರಣಾತ್ಮಕ ಪ್ರಬಂಧಗಳು
5)ಊಹಾ ಪ್ರಬಂಧಗಳು
6)ಕಥನ ರೂಪದ ಪ್ರಬಂಧಗಳು
7)ಆಲೋಚನಾತ್ಮಕ ಪ್ರಬಂಧಗಳು
8)ವೈಜ್ಞಾನಿಕ ಪ್ರಬಂಧಗಳು
9)ವೈಚಾರಿಕ ಪ್ರಬಂಧಗಳು

ಈ ರೀತಿಯಾಗಿ ಪ್ರಬಂಧಗಳನ್ನು ವಿಂಗಡಿಸಬಹುದಾಗಿದೆ. ಇನ್ನೂ ಬೇರೆ-ಬೇರೆ ರೀತಿಯ ಪ್ರಬಂಧಗಳು ಇರಬಹುದು.

ಆದರೆ ನಾಗರಿಕ ಸೇವಾ ಪರೀಕ್ಷೆಯಲ್ಲಿ ಮುಖ್ಯವಾಗಿ ಚಿಂತನಾಶೀಲ ಮತ್ತು ಆಲೋಚನಾತ್ಮಕ ವಿವರಗಳನ್ನು ಬರೆಯುವ ಪ್ರಬಂಧಗಳನ್ನು ಕೇಳಲಾಗುತ್ತದೆ.


downloaded from: www,kpscvaani.com

## ಪ್ರಬಂಧ ಬರೆಯುವ ಹಂತಗಳು :

ಸಾಮಾನ್ಯವಾಗಿ ಪ್ರಬಂಧವನ್ನು ಐದು ಹಂತಗಳು ಅಥವಾ ನಾಲ್ಕು ಹಂತಗಳಲ್ಲಿ ಬರೆಯಲಾಗುತ್ತದೆ. ಅವುಗಳ ಮಾದರಿ ವಿವರಣೆ ಈ ರೀತಿಯಾಗಿದೆ.

**1)ಪೀಠಿಕೆ:** ಪೀಠಿಕೆಯಲ್ಲಿ ಇಡೀ ವಿಷಯದ ಪರಿಚಯ ಅಥವಾ ಮುನ್ನೋಟ ನೀಡಬೇಕು. ನೇರವಾಗಿ ವಿಷಯಕ್ಕೆ ಬಾರದೆ, ಪ್ರಬಂಧ ವಿಷಯಕ್ಕೆ ಸನಿಹವೆನಿಸುವ ಅಥವಾ ಸೂಕ್ತವೆನಿಸುವ ಒಳ್ಳೆಯ ನುಡಿಗಟ್ಟುಗಳು, ಶುಭಾಷಿತಗಳು, ವಚನಗಳು, ಮಂಕುತಿಮ್ಮನ ಕಗ್ಗ, ಮಹಾತ್ಮರ ಹೇಳಿಕೆಗಳನ್ನು ಆರಂಭದಲ್ಲಿ ಪ್ರಸ್ತಾಪಿಸಿ ವಿಷಯಕ್ಕೆ ಪೀಠಿಕೆಯನ್ನು ಹಾಕಬೇಕು. ಬಹುತೇಕ ಮೌಲ್ಯಮಾಪಕರು ಪೀಠಿಕಿಯಿಂದ ಪ್ರೇರೇಪಿತರಾಗಿ ಅಂಕಗಳನ್ನು ನಿಗದಿಪಡಿಸುತ್ತಾರೆ, ಆದ ಕಾರಣ ಸಾಧ್ಯವಾದಷ್ಟು ಪೀಠಿಕೆ ಆಕರ್ಷಕವಾಗಿರಬೇಕು.

**2)ಅರ್ಥ:** ಪ್ರಬಂಧ ಬರೆಯಲು ನೀಡಿರುವ ವಿಷಯದ ನೈಜಾರ್ಥವನ್ನು ವ್ಯಾಖ್ಯಾನಿಸಬೇಕು.

**3)ವಿವರಣೆ:** ಇದು ಪ್ರಬಂಧದ ಒಡಲಾಗಿದೆ. ಪ್ರಬಂಧದ ಎಲ್ಲಾ ವಿವರಗಳು, ಸಾಧಕ–ಬಾಧಕಗಳು, ನಿವಾರಣೋಪಾಯಗಳನ್ನು ಒಳಗೊಂಡಿರಬೇಕು. ಎಲ್ಲಾ ಮಾಹಿತಿಯನ್ನು ಒಂದೇ ಕಂಡಿಕೆ(ಪ್ಯಾರಾಗ್ರಾಫ್)ಯಲ್ಲಿ ಮುಗಿಸಬಾರದು. ಒಂದೊಂದು ವಿಚಾರವನ್ನು ಒಂದೊಂದು ಕಂಡಿಕೆಯಲ್ಲಿ ನಮೂದಿಸಬೇಕು ಒಂದು ಕಂಡಿಕೆಯಿಂದ ಮತ್ತೊಂದು ಕಂಡಿಕೆಗೆ ಸಂಪರ್ಕ ಕಲ್ಪಿಸುವ ಸೂಕ್ತವಾದ ವಾಕ್ಯಗಳ ಸೇತುವೆಯನ್ನು ಬಳಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ವಿಷಯಾಂತರವಾಗದೆ, ವಿವಾದಾತ್ಮಕ, ಬೇರೆಯವರ ಭಾವನೆಗೆ ಧಕ್ಕೆ ತರುವ ಮತ್ತು ಪೂರ್ವಾಗ್ರಹ ಪೀಡಿತ, ಏಕನಿಷ್ಠ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪ್ರಯತ್ನಿಸಬೇಡಿ.

**4)ಉಪಸಂಹಾರ:** ಪ್ರಬಂಧದ ಕೊನೆಯ ಹಂತ ಇದಾಗಿದೆ. ಇಲ್ಲಿ ಬರೆಯುವವರು ನೀಡಿದ ವಿಷಯದ ಕುರಿತು ತಮ್ಮ ಸ್ವಂತ ಅಭಿಪ್ರಾಯ ಬರೆದು ಪ್ರಬಂಧವನ್ನು ಮುಕ್ತಾಯಗೊಳಿಸಬಹುದಾಗಿದೆ.

**ಮಾದರಿ ಪ್ರಬಂಧ ಹೇಗಿರಬೇಕು?**

ಪ್ರಬಂಧ ಬರೆಯುವುದು ಒಂದು ವಿಶಿಷ್ಟ ಕಲೆಯಾಗಿದೆ. ಸಾಮಾನ್ಯ ಪ್ರಬಂಧಗಳೇ ಇರಲಿ, ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಬರೆಯುವ ಪ್ರಬಂಧಗಳೇ ಇರಲಿ ಓದುಗರನ್ನು, ಮೌಲ್ಯ ಮಾಪಕರನ್ನು ಸೆಳೆಯುವಂತಿರಬೇಕು. ಯಾವ ವಿಷಯದಲ್ಲಿ ಪ್ರಬಂಧಗಳನ್ನು ಕೇಳಲಾಗಿದೆಯೋ ಆ ವಿಷಯದ ಕುರಿತು ನಿಗದಿತ ಪದಗಳ, ವಾಕ್ಯಗಳ ವ್ಯಾಪ್ತಿಯಲ್ಲಿ ಇರಬೇಕು.


downloaded from: www,kpscvaani.com




**ಪ್ರಬಂಧ ಬರೆಯುವಾಗ ಗಮನಿಸಬೇಕಾದ ಅಂಶಗಳು**

- ಪ್ರಬಂಧಕ್ಕೆ ನೀಡಿದ ವಿಷಯವನ್ನು ಮೊದಲು ಚೆನ್ನಾಗಿ ಮನನವಾಗುವಂತೆ ಓದಿಕೊಳ್ಳಿ.
- ಎಷ್ಟು ಪದಗಳ, ವಾಕ್ಯಗಳ ಮಿತಿ ಇದೆ ಎಂಬುದನ್ನು ತಿಳಿದುಕೊಳ್ಳಿ.
- ಪ್ರಬಂಧದಲ್ಲಿ ಗಾದೆ ಮಾತುಗಳು, ಅಂಕಿ–ಅಂಶಗಳು, ವ್ಯಾಖ್ಯೆಗಳು, ನುಡಿಗಟ್ಟುಗಳು, ವಿಶೇಷ ಅಂಶಗಳನ್ನು ಸೇರಿಸಿ ಬರೆಯಿರಿ.
- ವಿಷಯದ ವ್ಯಾಪ್ತಿಯನ್ನು ಮೀರದಿರಲಿ ಮತ್ತು ವಿಷಯಾಂತರವಾಗದಿರಲಿ.
- ಪೂರ್ವಾಗ್ರಹ ಪೀಡಿತ ಮನೋಭಾವದ ಅಭಿವ್ಯಕ್ತಿ ಬೇಡ, ವಸ್ತುನಿಷ್ಠ ವಿಶ್ಲೇಷಣೆ ಇರಬೇಕು.
- ಪ್ರಬಂಧಕ್ಕಾಗಿಯೇ ಅತಿ ಹೆಚ್ಚು ಸಮಯ ತೆಗೆದುಕೊಳ್ಳುವುದು ಬೇಡ. ಕೇವಲ ಪ್ರಬಂಧದ ಪತ್ರಿಕೆಯಾದರೂ ಸಮಯದ ಮಿತಿಯಲ್ಲಿಯೇ ಎಲ್ಲಾ ಹಂತಗಳು ಮತ್ತು ಸಮಗ್ರ ಅಂಶಗಳ ಮುಖ್ಯಾಂಶಗಳು ಸೇರುವಂತೆ ಬರೆಯಿರಿ.


downloaded from: www,kpscvaani.com

- ಪ್ರಬಂಧವನ್ನು ವೇಗವಾಗಿ ಮತ್ತು ಸುಂದರವಾದ, ಆಕರ್ಷಕ ಬರವಣಿಗೆಯಲ್ಲಿ ಬರೆಯಬೇಕು. ಪ್ರಬಂಧವನ್ನು ಹೇಗಾದರೂ ಮಾಡಿ ಬರೆಯುತ್ತೇನೆ ಎಂಬ ಭಂಡ ಧೈರ್ಯ ಬೇಡ. ನೀಡಿದ ಕಾಲಾವಕಾಶದಲ್ಲಿ ಬರೆಯುವುದು ಅಷ್ಟು ಸುಲಭ ಅಲ್ಲ. ತಪ್ಪಿಲ್ಲದಂತೆ, ಸುಂದರವಾಗಿ, ಶೀಘ್ರವಾಗಿ, ಸ್ಪಷ್ಟ ವಿಷಯದೊಂದಿಗೆ ಮಾದರಿ ಪ್ರಬಂಧಗಳನ್ನು ಬರೆಯುವುದನ್ನು ರೂಢಿಸಿಕೊಳ್ಳಬೇಕು. ಈ ರೀತಿಯ ರೂಢಿ ಇದ್ದರೆ ಮಾತ್ರ ಪರೀಕ್ಷೆಯಲ್ಲಿ ಸುಲಲಿತವಾಗಿ ಬರೆಯಲು ಸಾಧ್ಯವಾಗುವುದು.
- ಪ್ರಬಂಧದ ಕೊನೆಯಲ್ಲಿ ಬರೆಯುವ ಉಪಸಂಹಾರದಲ್ಲಿ ನಿಮ್ಮ ಸ್ಪಷ್ಟ ಅಭಿಪ್ರಾಯವನ್ನು ಬರೆದು ಮುಕ್ತಾಯಗೊಳಿಸಿರಿ. ಉಪಸಂಹಾರವು ಈ ವಿಷಯದಲ್ಲಿ ನಿಮ್ಮ ಸಕಾರಾತ್ಮಕ ಮನೋಭಾವನೆ ಇರಲಿ.
- ಪ್ರಬಂಧದ ಯಾವುದೇ ಹಂತದಲ್ಲಿಯೂ ಮೌಲ್ಯಮಾಪಕರಿಗೆ ಗೊಂದಲ ಉಂಟಾಗದಂತೆ, ವಿಷಯಾಂತರವಾಗದಂತೆ ಎಚ್ಚರಿಕೆವಹಿಸಬೇಕು.
- ಪ್ರಬಂಧ ಚಿಕ್ಕದಾಗಿದ್ದರೂ ಚೊಕ್ಕವಾಗಿ ಇಡೀ ವಿಷಯದ ಮುಖ್ಯಾಂಶಗಳನ್ನು ಬಿಂಬಿಸುವಂತಿರಬೇಕು.
- ಇಂತಹದೇ ವಿಷಯ ಪರೀಕ್ಷೆಯಲ್ಲಿ ಬರುತ್ತದೆ ಎಂದು ಊಹಿಸಿ ಸೀಮಿತ ವಿಷಯಗಳ ಕುರಿತ ಅಧ್ಯಯನ ಮಾಡಬಾರದು. ಎಲ್ಲಾ ವಿಷಯಗಳ ಕುರಿತು ತಲಸ್ಪರ್ಶಿಯಾಗಿ ವಿಮರ್ಶಿಸುವ ಕಲೆಯನ್ನು ರೂಢಿಸಿಕೊಂಡಿರಬೇಕು ಮತ್ತು ಅಗಾಧ ವಿಷಯ ಸಂಗ್ರಹಣೆ ಇರಬೇಕು. ನೀಡಿದ ಪ್ರಬಂಧಗಳಲ್ಲಿ ಪ್ರಚಲಿತವಾದ ವಿಷಯಗಳ ಜೊತೆಗೆ ಎಲ್ಲಾ ಕಾಲಕ್ಕೂ ಸೂಕ್ತ ಎನಿಸುವ ವಿಷಯಗಳು ಬಂದಿರುತ್ತವೆ ಎಂಬುದು ನಿಮ್ಮ ಗಮನದಲ್ಲಿ ಇರಲಿ.
- ಪ್ರಬಂಧದಲ್ಲಿ ನೀಡಿದ ಕೆಲವು ವಿಷಯಗಳು ತೀರಾ ಸಾಮಾನ್ಯ ಅಥವಾ ಸರಳ ಎಂದು ಅನಿಸಬಹುದು ಆದರೆ ಒಳಾರ್ಥದಲ್ಲಿ ಅವುಗಳಷ್ಟು ಕಠಿಣ ಬೇರೆ ವಿಷಯಗಳಾಗಿರುವುದಿಲ್ಲ ಎಂಬುದು ನಿಮಗೆ ಮನವರಿಕೆಯಾಗಿರಲಿ.
- ಪ್ರಬಂಧದಲ್ಲಿ ನೀಡಿದ ಅಂಕಿ-ಅಂಶಗಳು, ವ್ಯಾಖ್ಯೆಗಳು, ಉಲ್ಲೇಖನಗಳು ನಿಖರವಾಗಿರಬೇಕು.
- ಒಂದು ವಿಷಯದ ಕುರಿತ ಪ್ರಬಂಧವನ್ನು ಒಂದು ನೂರು ಜನರಿಗೆ ನೀಡಿದರೆ ನೂರೂ ಜನರೂ ಬೇರೆ-ಬೇರೆ ರೀತಿಯಲ್ಲಿ ಬರೆಯುತ್ತಾರೆ. ಆದರೆ ಒಂದು ಮಾದರಿ ಪ್ರಬಂಧದ ಹಂತಗಳು, ಅಂಶಗಳು, ಉದ್ದೇಶಗಳು ನೀವು ಬರೆಯುವ ಪ್ರಬಂಧದಲ್ಲಿ ಮಿಳಿತವಾಗಿರಬೇಕು. ಮೌಲ್ಯಮಾಪಕರಿಗೆ ಅದು ಸೂಕ್ತ ವಿಷಯಾಂಶದ ಮತ್ತು ಸಮತೂಕದ ಪ್ರಬಂಧ ಎನಿಸಬೇಕು.


downloaded from: www,kpscvaani.com

- ಪ್ರಬಂಧವು ಸರಳ ಭಾಷೆಯಲ್ಲಿ ಇರಬೇಕು ಓದಲು ಪ್ರೇರೇಪಿಸುವಂತಿರಬೇಕು.
- ಯಾವುದಾದರೂ ಪಾರಿಭಾಷಿಕ ಪದಗಳನ್ನು ಬಳಸಿದರೆ ಅವುಗಳ ಸ್ಪಷ್ಟ ಅರ್ಥವನ್ನು ತಿಳಿಸಬೇಕು.
- ಮಿತಿಗಿಂತ ಹೆಚ್ಚು ಇರಬಾರದು ಮತ್ತು ಕಡಿಮೆಯೂ ಇರಬಾರದು.
- ಯಾವುದೋ ಒಂದು ಹಂತವನ್ನೇ ಪೂರ್ಣವಾಗಿ ಪ್ರಬಂಧದಲ್ಲಿ ಬರೆಯಬಾರದು. ಉದಾಹರಣೆಗೆ ವಿವರ ಅಂಶವನ್ನೇ ಬಹಳ ಬರೆದು ಉಳಿದ ಅಂಶಗಳನ್ನು ಅಲಕ್ಷಿಸಬಾರದು. ಎಲ್ಲಾ ಅಂಶಗಳನ್ನು ಅಗತ್ಯತೆಗೆ ಅನುಗುಣವಾಗಿ ಪೂರ್ಣಗೊಳಿಸಿರಬೇಕು.
- ಕಾಲ್ಪನಿಕ ಅಂಶಗಳಿಗಿಂತ ನೈಜ ಅಂಶಗಳನ್ನು ಒಳಗೊಂಡಿರಬೇಕು. ಹೀಗಿದ್ದರೆ ಚೆನ್ನ ಎನ್ನುವುದಕ್ಕಿಂತ ವಾಸ್ತವಿಕ ನೆಲೆಯಲ್ಲಿ ಸಾಧ್ಯ ಎನ್ನಬಹುದಾದ ವಿವರಗಳನ್ನು ಮತ್ತು ಕಾನೂನಿನ ವ್ಯಾಪ್ತಿಯಲ್ಲಿಯೇ ಬರುವಂತಹ ಅಂಶಗಳು ಇದ್ದರೆ ಉತ್ತಮ.






downloaded from: www,kpscvaani.com